ಕುಂದಾಪುರ ಕ್ಷೇತ್ರದ ಅಮಾಸೆಬೈಲುನಲ್ಲಿರುವ ಪ್ರೌಢಶಾಲೆಯಲ್ಲಿ ಶಿಕ್ಷಕರ ಕೊರತೆ

೧೦೦೩. ಶ್ರೀಯುತ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ). —ಮಾನ್ಯ ಶಿಕ್ಷಣ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶ್ರೀ ಕುಂದಾಪುರ ಕ್ಷೇತ್ರದ ಅಮಾಸೆ ಬೈಲು ಪ್ರೌಢ ಶಾಲೆಗೆ ಮಂಜೂರಾದ ವಿವಿಧ ದರ್ಜೆಯ ಹುದ್ದೆಗಳೆಷ್ಟು ?

ಆ) ಸದರಿ ಪ್ರೌಢ ಶಾಲೆಯಲ್ಲಿ ಕೊರತೆಯಿರುವ ಹುದ್ದೆಗಳೆಷ್ಟು ? ಹಾಗೂ ಯಾವ ವಿಷಯದ ಅಧ್ಯಾಪಕರ ಹುದ್ದೆಗಳ ಕೊರತೆಯಿಂದ ?

ಇ) ಶ್ರೀ ಈ ಕೊರತೆಯನ್ನು ಯಾವಾಗ ನಿವಾರಿಸಲಾಗುವುದು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಕೆಳಕಂಡ ಹನ್ನೆರಡು ಹುದ್ದೆಗಳು ಮಂಜೂರಾಗಿದೆ.

೧) ಮುಖ್ಯೋಪಾಧ್ಯಾಯರ ಹುದ್ದೆ	೧ ಹುದ್ದೆ
೨) ಪ್ರೌಢ ಶಾಲಾ ಸಹ ಶಿಕ್ಷಕರ ಶ್ರೇಣಿ–೨	೫ ಹುದ್ದೆ
೩) ಕನ್ನಡ ಭಾಷಾ ಶಿಕ್ಷಕರು	೧ ಹುದ್ದೆ
೪) ದೈಹಿಕ ಶಿಕ್ಷಣ ಶಿಕ್ಷಕರ ಶ್ರೇಣಿ–೧	೧ ಹುದ್ದೆ
೫) ದ್ವಿತೀಯ ದರ್ಜೆ ಗುಮಾಸ್ತ	೧ ಹುದ್ದೆ
೬) ಜವಾನ–ಸಹಿತ ಕಾವಲುಗಾರ	೧ ಹುದ್ದೆ
೭) ವೃತ್ತಿ ಶಿಕ್ಷಕರು	೨ ಹುದ್ದೆ

ಆ) ಮೂರು ಹುದ್ದೆಗಳು ಕೊರತೆ ಇದೆ. ಸಹಾಯಕ ಶಿಕ್ಷಕರ ಹುದ್ದೆ–ಒಂದು, ವೃತ್ತಿ ಶಿಕ್ಷಕರ ಹುದ್ದೆಗಳು–ಎರಡು

ಇ) ವಿಭಾಗೀಯ ನೇಮಕಾತಿ ಸಮಿತಿಯಿಂದ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿ ಬಂದಿದ ಕೂಡಲೇ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಪಟ್ಟಿಯನ್ನು ಸಭೆಯ ಮುಂದಿಡಲಾಯಿತು.

ಕೊಡಗು ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ಕೆಲಸಗಳ ವಿಳಂಬದ ಬಗ್ಗೆ

೭೫೪. ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಗೆ ಕಳೆದ ವರ್ಷದ ಆಯವ್ಯಯದಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿ ಕೆಲಸಗಳನ್ನು ಪ್ರಾರಂಭ ಮಾಡಲಾಗಿದೆಯೇ,

1) ೭ ಲಕ್ಷ ರೂಪಾಯಿಗಳ ಅಂದಾಜು ವೆಚ್ಚದ ಕಾಜಿಗೇರಿ, ಬಿಳಿಗೇರಿ, ಅರ್ವತೊಕ್ಕಲು ರಸ್ತೆ

೨) ಕಾಲೂರು ಗ್ರಾಮದಲ್ಲಿನ ಕಾಲೂರ ಸೇತುವೆ,

೩) ಹೊಸಗೇರಿ ಗ್ರಾಮದಲ್ಲಿನ ಹೊಸಗೇರಿ ಸೇತುವೆ,

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಮತ್ತು ಆ) ಅರವತೊಕ್ಕಲು ಕೂಡು ರಸ್ತೆ

---

೧) ಈ ಕೆಲಸದ ೭,೦೦,೦೦೦ ರೂ.ಗಳ ಅಂದಾಜು ಪಟ್ಟಿಗೆ ಡಿಸೆಂಬರ್ ೮೬ರಲ್ಲಿ ಆಡಳಿತಾತ್ಮಕ ಮಂಜೂರಾತಿ ಮತ್ತು ಜನವರಿ ೧೯೮೭ರಲ್ಲಿ ತಾಂತ್ರಿಕ ಮಂಜೂರಾತಿ ಕೊಡಲಾಗಿದ್ದು, ಕೆಲಸವನ್ನು ನಿಯಮಗಳಂತೆ ಪ್ರಾರಂಭ ಮಾಡಲಾಗುವುದು.

೨) ಕಾಲೂರು ಗ್ರಾಮದಲ್ಲಿನ ಕಾಲೂರು ಸೇತುವೆ,

ಈ ಕಾಮಗಾರಿಗೆ ಗುತ್ತಿಗೆದಾರರನ್ನು ನಿಯಮಿಸಿದ್ದು ಕಾಮಗಾರಿಯನ್ನು ಪ್ರಾರಂಭಿಸಲು ಸಿದ್ಧತೆಗಳನ್ನು ಮಾಡಲಾಗಿದೆ.

೩) ಹೊಸಗೇರಿ ಗ್ರಾಮದಲ್ಲಿನ ಹೊಸಗೇರಿ ಸೇತುವೆ,

ಈ ಸೇತುವೆ ಕೆಲಸವನ್ನು ಮಾರ್ಚ್ ೧೯೮೭ರಲ್ಲಿ ಪೂರೈಸಲಾಗಿದೆ.

Adult Education Centres

909. SRI VEDANTHA HEMMIGE (Krishna Raja).—Will the Minister for education be pleased to state.—

a) Places where the Adult Education Centres are in the state.

b) How many Vidyapeethas in the State and where they are ?

c) Yearly expenditure incurred for improving the Vidyapeetahas

d) Financial Assistance by State and Central Government every year.

e) Is there a Committee Contituted for the Council.

SRI. D. MANJUNTAHA (Education Minister).—

a) In all the 19 Districts in the State except Bidar District.

b) There are 14 Vidyapeethas in the State (Statement appended).

c) 10,37,50/-

d) By State Government both under Plan and Non-Plan is Rs. 18,23,220.00

By Central Government Rs. 34,06,704.00

Total Rs.1,15,29,924,00